ಆದರೆ ಜಿಲ್ಲಾ ಆಸ್ಪತ್ರೆ, ಗುಲರ್ಗ ಇಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಯಲ್ಲಿ ಅಕ್ರಮವಾಗಿರುವುದು ಕಂಡು ಬಂದಿದ್ದು ಒಟ್ಟು ಮೌಲ್ಯ ರೂ 21,477–00 ಆಗಿರುತ್ತದೆ

ಇ) ತನಿಖೆ ಪೂರ್ಣಗೊಂಡು ನಂತರ ನಕಲಿ ಬಿಲ್ ಸೃಷ್ಟಿಕರ್ತರು ಯಾರು ಎಂಬುದನ್ನು ಗುರುತಿಸಿ ಇದರಲ್ಲಿ ಭಾಗಿಯಾದವರನ್ನು ಪತ್ತೆ ಮಾಡಲಾಗುವುದು

ಆದರೆ ಸದ್ಯದಲ್ಲಿ ಜಿಲ್ಲಾ ಆಸ್ಪತ್ರೆ, ಗುಲ್ಬರ್ಗದಲ್ಲಿ ಒಂದರಲ್ಲಿ ಮಾತ್ರ ಈ ಕೃತ್ಯದಲ್ಲಿ ಶಾಮೀಲಾಗಿರುವ ಈ ಕೆಳಗಿನ 5 ಮಂದಿ ಸಿಬ್ಬಂದಿಗಳನ್ನು ಗುರುತಿಸಿದ್ದು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ದಿನಾಂಕ 28 11 2003 ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡಲಾಗಿದೆ

1 ಶ್ರೀ ಶರಣಪ್ಪ ಹಿರಿಯ ಫಾರ್ಮಸಿಸ್ಟ್
2 ಶ್ರೀ ಸೈಯದ್ ಫಯಾಸ್ ಆಲಿ, ಹಿರಿಯ ಫಾರ್ಮಸಿಸ್ಟ್
3 ಶ್ರೀ ಭಗವಾನ್, ಕಛೇರಿ ಜವಾನ
4 ಶ್ರೀ ದುರ್ಗಯ್ಯ, ಕಛೇರಿ ಜವಾನ
5 ಶ್ರೀ ಶಂಕರ ಕಛೇರಿ ಜವಾನ

ಈ) ತನಿಖೆ ಪೂರ್ಣಗೊಂಡ ನಂತರ ವೈದ್ಯರು ಪಾಲ್ಗೊಂಡಿರುವ ಬಗ್ಗೆ ಪೂರ್ಣ ಮಾಹಿತಿ ಲಭ್ಯವಾಗುತ್ತದೆ ಆದಾಗ್ಯೂ ಸದ್ಯಕ್ಕೆ ಡಾ ಎಸ್ ಎಸ್ ಪಾಟೀಲ್, ವೈದ್ಯರು, ಜಿಲ್ಲಾ ಆಸ್ಪತ್ರೆ ಗುಲ್ಬರ್ಗ ಎಂಬುವರನ್ನು ಈ ಪ್ರಕರಣದಲ್ಲಿ ಗುರುತಿಸಲಾಗಿದೆ ವೈದ್ಯರು ಪಾಲ್ಗೊಂಡಿದ್ದು ಸಾಬೀತಾದಲ್ಲಿ ನಿಯಮಾನುಸಾರ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು

ಉ) ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಕರ್ನಾಟಕ ಲೋಕಾಯುಕ್ತ ಜಾಗೃತ ನಿರ್ದೇಶಕರಿಂದ ಪತ್ರ ಬಂದ ನಂತರ ಹಾಗೂ ಇಲಾಖೆಯಿಂದ ನಡೆಸಿದ ತಪಾಸಣಾ ಸಂದರ್ಭದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಅಕ್ರಮ ಪ್ರಕಣ ಬೆಳಕಿಗೆ ಬಂದಿರುತ್ತದೆ 2002–03 ನೇ ಸಾಲಿನಿಂದ ಈ ಪ್ರಕರಣವು ಬೆಳಕಿಗೆ ಬಂದಿದೆ

ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯುನಾನಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಕಟ್ಟಡದ ನಿರ್ಮಾಣ ಕಾರ್ಯ

157 (532) ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ವೈದ್ಯಕೀಯ ಶಿಕ್ಷಣದ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯುನಾನಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಕಟ್ಟಡದ ನಿರ್ಮಾಣದ ಕಾರ್ಯವನ್ನು ಎಂದು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು

ಆ) ಒಟ್ಟು ಕಾಮಗಾರಿಯ ವೆಚ್ಚವೆಷ್ಟು?

ಡಾ॥ ಎ ಬಿ ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಯುನಾನಿ ವೈದ್ಯಕೀಯ ಕಾಲೇಜಿನ ಕಟ್ಟಡ ನಿರ್ಮಾಣವನ್ನು 1998 ರ ಫೆಬ್ರವರಿಯಲ್ಲಿ ಪ್ರಾರಂಭಿಸಲಾಗಿದೆ ಈ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು

ಆ) ಈ ಕಾಮಗಾರಿಗೆ ಡಿಸೆಂಬರ್ 2003ರ ಅಂತ್ಯದವರೆಗೆ ರೂ 47 83 ಲಕ್ಷ ವೆಚ್ಚವಾಗಿರುತ್ತದೆ